

ಗುಟ್ಟನ್ನು ನಾನೇಕೆ ಬಿಟ್ಟುಕೊಡಬೇಕು ಎನ್ನಿಸಿ ಸುಮ್ಮನುಳಿದುಬಿಟ್ಟೆ. ವಿರಾಜನೆಂದುಕೊಂಡ ತನ್ನಿಂದ ದಾಂಪತ್ಯ ಸುಖ ಕೊಡಲು ಸಾಧ್ಯವಿಲ್ಲವೆಂದು. ಆದರೆ ಅವನು ಕೊಟ್ಟ ಸುಖ, ಕನಸು, ನೆನಪುಗಳು ಜನ್ಮಪೂರ್ತಿಗಾಗುವಷ್ಟಾಗಿತ್ತು.' ಆರ್ದ್ರವಾದಳು ಪೂರ್ಣಿಮಾ.

ಸಾಂತ್ವನ ಹೇಳುವ ನೈತಿಕ ಹಕ್ಕೂ ತನಗಿಲ್ಲವಲ್ಲ ಎಂದು ಪರಿತಪಿಸಿದಳು ರುಕ್ಮಿಣಿ. ಪೂರ್ಣಿಮಕ್ಕನ ಪ್ರೀತಿ ವಿರಾಜ ಭಾವ ಸತ್ತ ಮೇಲೂ ಮೊದಲಿನಂತೆಯೇ ಅಚಲವಾಗಿದೆ. ಆದರೆ ಭಾವ ಸತ್ತ ಮೇಲೆ ಕೆಟ್ಟಿದ್ದು ನಮ್ಮ ಸಂಸಾರ ಮಾತ್ರ, ಪ್ರೀತಿಯನ್ನು ನಿಭಾಯಿಸುವುದು ಪ್ರೀತಿಸಿದಷ್ಟು ಸುಲಭವಲ್ಲ ಎಂದು ನೊಂದ ರುಕ್ಮಿಣಿಯ ಮುಖದ ಮೇಲೆ ಪಶ್ಚಾತ್ತಾಪದ ಅಲೆಗಳು, ಇನ್ನೂ ಹಲವು ಭಾವನೆಗಳು ಮೆರವಣಿಗೆ ಹೊರಟಿದ್ದವು!

'ಹಣದ ಅವಶ್ಯಕತೆ ಏಕೆಂದು ಕೇಳಲೇ ಇಲ್ಲವಲ್ಲ ರುಕ್ಕು...' ಮಾತು ಬದಲಿಸಿದಳು ಪೂರ್ಣಿಮಾ.

ರುಕ್ಮಿಣಿಗೆ ಇನ್ಯಾವ ಕಾರಣದ ಅವಶ್ಯಕತೆಯಿದೆ ಎನ್ನಿಸಲಿಲ್ಲ.

'ಪೂವಿ ಅನಾಥಾಶ್ರಮ ನಿನಗೆ ಗೊತ್ತಿದೆಯೋ ಇಲ್ಲವೋ, ತುಮಕೂರಿನ ಗುಬ್ಬಿಯ ಬಳಿಯಿದೆ. ಒಂದು ಬಾಡಿಗೆ ಬಿಲ್ಡಿಂಗ್‌ನಲ್ಲಿ ಅನಾಥಾಶ್ರಮ ನಡೆಸುತ್ತಿದ್ದೆವು. ಕಟ್ಟಡದ ಓನರ್ ಈಗ ಆ ಕಟ್ಟಡವನ್ನು ಲೀಸ್‌ಗೆ ಹಾಕಿಕೊಳ್ಳಿ ಅಥವಾ ಜಾಗ ಖಾಲಿ ಮಾಡಿ ಅನ್ನುತ್ತಿದ್ದಾನೆ. ಆದರೆ ಲೀಸಿಗೆ ಹಾಕಿಕೊಳ್ಳುವಷ್ಟು ಹಣ ನನ್ನ ಬಳಿಯಿಲ್ಲ. ಸ್ವಲ್ಪ ದುಡ್ಡಿನ ಸಹಾಯ ಅಂತ ಮಾಡಿದರೆ ಏನೋ ಅನಾಥ ಮಕ್ಕಳು ನಿನ್ನನ್ನು ನೆನಪಿಸಿಕೊಳ್ತಾವೆ. ಈ ಸಮಯದಲ್ಲಿ ಇಲ್ಲಾ ಎನ್ನಬೇಡ ರುಕ್ಕು. ನನ್ನನ್ನು ಸ್ವಾಭಿಮಾನವಿಲ್ಲದ ಹೆಂಗಸೆಂದುಕೊಂಡರೂ ಸರಿಯೇ, ಕೈಲಾದಷ್ಟು ಹಣ ಕೊಡು ಸಾಕು.' ಎಂದು ಬೇಡಿಕೊಂಡಳು ಪೂರ್ಣಿಮಾ. ಅಕ್ಷರಶಃ ಗೋಗರೆಯುತ್ತಿದ್ದಳು.

ಕೈಗೆ ಕಟ್ಟಿದ ಗಡಿಯಾರದ ಮುಳ್ಳುಗಳು ತನ್ನ ಪಾಡಿಗೆ ತಾನು ನಡೆಯುತ್ತಿದ್ದರೂ ಸಮಯ ಮಾತ್ರ ಓಡಿದಂತೆ ಭಾಸವಾಯಿತು ರುಕ್ಮಿಣಿಗೆ. 'ಇವೆಲ್ಲ ದೊಡ್ಡ ಮಾತು ಪೂರ್ಣಿಮಕ್ಕ. ಅರ್ಜೆಂಟ್ ಆಗಿ ವಿಕ್ರಂನನ್ನು ನೋಡಲು ಹೋಗಬೇಕಿದೆ. ಪೂವಿ ಅನಾಥಾಶ್ರಮಕ್ಕೆ ನಾನೇ ಬರುತ್ತೇನೆ. ಸ್ವಲ್ಪ ಕಾಲಾವಕಾಶ ಬೇಕು. ಇಫ್ ಯೂ ಡೋಂಟ್‌ಮೈಂಡ್ ಕೇನಾಯ್ ಟೇಕ್ ಯುವರ್ ಪರ್ಮಿಷನ್ ಟು ಲೀವ್ ನೌ' ಎಂದು ಎದ್ದಳು.

'ಹಮ್ಮ್, ಹೋಪ್ ಯು ಡಿಡ್ ನಾಟ್ ಮೈಂಡ್ ಫಾರ್ ಮೈ ಆಸ್ಕ್' ಎಂದು ಪೇಲವ ನಗೆ ನಕ್ಕಳು ಪೂರ್ಣಿಮಾ.

★★★

ಪೂರ್ಣಿಮಕ್ಕ ಕಾರ್ತಿಕನ ಜೊತೆ ಸಂಬಂಧ ಬೆಳೆಸಿದ್ದರಿಂದಲೇ ವಿರಾಜ್ ಭಾವನವರು ನೇಣುಬಿಗಿದುಕೊಂಡು ಸತ್ತಿದ್ದು ಎಂದು ನಾನೂ ಸುಲಭವಾಗಿ ನಂಬಿ ಬಿಟ್ಟಿದ್ದೆನಲ್ಲ, ಹೀಗಿರುವಾಗ ಅದಾಗಲೇ ಕಂಪನಿಯ ತಾಪತ್ರಯವನ್ನೆಲ್ಲಾ ತನ್ನ ಮೇಲೆಳೆದುಕೊಂಡು ಕಂಗಾಲಾಗಿದ್ದ ವಿಕ್ರಂ ಹಿಂದೆ ಮುಂದೆ ಯೋಚಿಸದೆ ಪೂರ್ಣಿಮಕ್ಕನ ಮೇಲಿದ್ದ ತನ್ನ ಸಂಶಯವನ್ನು ನನ್ನ ಮೇಲೆ ಆಪಾದಿಸಿ ನನ್ನನ್ನೂ ಸಂಶಯಿಸಿದ್ದು ತಪ್ಪು ಎಂದು ಹೇಗೆ ಹೇಳಲಿ! ನನ್ನ ಹಣೆಬರಹಕ್ಕೆ ಬೇರೊಬ್ಬರತ್ತ ಬೆಟ್ಟು ತೋರಿಸಿ ನಾನು ನುಣುಚಿಕೊಂಡು ಕಡಿದು ಗುಡ್ಡೆ ಹಾಕುವ ಬೆಟ್ಟವಾದರೂ ಯಾವುದಿದೆ ಎಂದೆಣಿಸುತ್ತ ತೆವಳಿಕೊಂಡು ಜಯನಗರ ನರ್ಸಿಂಗ್ ಹೋಮಿಗೆ ಚಲಿಸುತ್ತಿದ್ದ ಕಾರಿನ ಏಸಿ ಹೆಚ್ಚಿಸಲು ಡ್ರೈವರನಿಗೆ ಹೇಳಿ ರುಕ್ಮಿಣಿ ಕಣ್ಣುಮುಚ್ಚಿ ಕುಳಿತಳು.

ಹಾಸ್ಪಿಟಲ್ ಎಂಟ್ರೆನ್ಸಿನಲ್ಲಿ ರುಕ್ಮಿಣಿಯನ್ನಿಳಿಸಿ ಕಾರು ವಾಲೆಟ್ ಪಾರ್ಕಿಂಗ್‌ನ ದಾರಿಯನ್ನರಸಿ ಹೊರಟಿತು. ರುಕ್ಮಿಣಿ ಏದುಸಿರು ಬಿಡುತ್ತಾ ಐಸಿಯೂ ಬಳಿಬಂದರೆ ಗುಪ್ತಾ ಗೋಡೆಗೊರಗಿ ಮಂಪರು ಹಿಡಿದವರಂತೆ ಕುಳಿತಿದ್ದ.